ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಇ : ಉ ನಿ : ಸುಮಪ : 2016-17 ದಿನಾಂಕ: 22-07-2017

# ಪತ್ರಿಕಾ ಆಮಂತ್ರಣ

**1. ಪೌರಕಾರ್ಮಿಕರ ಎರಡನೆ ತಂಡ ಸಿಂಗಪುರಕ್ಕೆ ಭೇಟಿ ಕಾರ್ಯಕ್ರಮ:**
**ಶುಭ ಕೋರುವವರು:**

1. ಕೆ.ಜೆ. ಜಾರ್ಜ್, ಬೆಂಗಳೂರು ನಗರಾಭಿವೃದ್ಧಿ ಸಚಿವರು,
2. ಹೆಚ್. ಆಂಜನೇಯ, ಸಮಾಜ ಕಲ್ಯಾಣ ಸಚಿವರು
3. ಆರ್. ರೋಷನ್‌ಬೇಗ್, ನಗರಾಭಿವೃದ್ಧಿ ಸಚಿವರು
4. ಈಶ್ವರ್ ಖಂಡ್ರೆ, ಪೌರಾಡಳಿತ ಸಚಿವರು

**ದಿನಾಂಕ: 24-7-2017 ಸೋಮವಾರ ಸಮಯ: ಬೆಳಿಗ್ಗೆ 11-30 ಗಂಟೆಗೆ**
**ಸ್ಥಳ: ಕೊಠಡಿ ಸಂಖ್ಯೆ 318, ವಿಕಾಸ ಸೌಧ, ಬೆಂಗಳೂರು**

# ಪತ್ರಿಕಾ ಪ್ರಕಟಣೆ

## ಅನ್ಯಾಯದ ವಿರುದ್ಧ ದನಿ ಎತ್ತಲು ಸಾಮಾಜಿಕ ಮಾಧ್ಯಮಗಳು ಪರಿಣಾಮಕಾರಿ:

**ಮಾರ್ಟಿನ್ ಲೂಥರ್ ಕಿಂಗ್ -III**

**ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)**

ನಮ್ಮ ಸಮಾಜದಲ್ಲಿ ಸಾಮಾಜಿಕ ಬದಲಾವಣೆ ಅಹಿಂಸಾ ಮಾರ್ಗದಿಂದ ಆಗಬೇಕಿದೆ. ಅಹಿಂಸಾ ಮಾರ್ಗದಿಂದ ಕ್ಷಣ ಮಾತ್ರದಲ್ಲಿ ಸಾಮಾಜಿಕ ಪರಿವರ್ತನೆ ನಿರೀಕ್ಷಿಸುವುದು ಅಸಾಧ್ಯ. ಇದು ಬಹಳ ಸಮಯವನ್ನು ನಿರೀಕ್ಷಿಸುತ್ತದೆ ಎಂದು ಮಾರ್ಟಿನ್ ಲೂಥರ್ ಕಿಂಗ್ – III ಅವರು ತಿಳಿಸಿದರು.

ಯಾವುದೇ ಶೋಷಣೆಯ ವಿರುದ್ಧ ಪ್ರತಿಭಟಣೆ ಅತ್ಯಗತ್ಯ. ಯಾರಾದರೂ ನಮ್ಮ ಮೇಲೆ ದಾಳಿ ಮಾಡಿದರೆ ಅದನ್ನು ವಿರೋಧಿಸಬೇಕು. ಆದರೆ ವಿರೋದ ಅಹಿಂಸಾತ್ಮಕವಾಗಿರಬೇಕು. ಈ ವಿಷಯದಲ್ಲಿ ಮಹಾತ್ಮಾಗಾಂಧಿಯವರ ಮಾರ್ಗ ಸರ್ವೋತ್ತಮ ಎಂದು ಅವರು ನುಡಿದರು.

ಸಾಮಾಜಿಕ ಮಾಧ್ಯಮಗಳು ಇಂದಿನ ಆಧುನಿಕ ಪ್ರಪಂಚದಲ್ಲಿ ಬಹಳ ಪರಿಣಾಮಕಾರಿಯಾಗಿದ್ದು ಸಮಾಜದ ಶೋಷಿತ ವರ್ಗದವರು ಸಾಮಾಜಿಕ ಜಾಲತಾಣಗಳನ್ನು ಬಳಸಿಕೊಂಡು ತಮಗೆ ಆಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತಬಹುದಾಗಿದೆ ಎಂದು ಸಮಾಜ ಸುಧಾರಕರಾದ ಮಾರ್ಟಿನ್ ಲೂಥರ್ ಕಿಂಗ್ -III ಅವರು ತಿಳಿಸಿದರು.

ಆಧುನಿಕ ಸಮಾಜದಲ್ಲಿ ಶೋಷಿತರ, ದಮನಿತರ ಪರ ಹೊರಾಡುವ ಅನೇಕ ಉತ್ತಮ ಯುವಕ/ಯುವತಿಯರು ನಮ್ಮ ನಿಮ್ಮ ನಡುವೆ ಇದ್ದು, ಇವರ ಹೋರಾಟದ ಫಲ ನಿಜವಾಗಿಯೂ ಅನೇಕ ಶೋಷಿತರಿಗೆ ಒಳಿತಾಗಬಲ್ಲದು ಎಂದರು.

ಅಂತೆಯೇ ಸಮಾಜದ ಶೋಷಿತರು ಮತ್ತು ದಲಿತ ವರ್ಗದವರು, ಶಿಕ್ಷಣ, ಆರೋಗ್ಯ, ಸಾಮಾಜಿಕ ಹೀಗೆ ಯಾವುದೇ ಕ್ಷೇತ್ರದಲ್ಲಾಗಲಿ ತಮಗಾಗುತ್ತಿರುವ ಅನ್ಯಾಯದ ವಿರುದ್ಧ ದನಿ ಎತ್ತಿದಾಗ ಮಾತ್ರ ಆಳುವ ಸರ್ಕಾರಗಳಿಗೆ ಸಮಸ್ಯೆಗಳ ಅರ್ಥವಾಗುತ್ತದೆ ಎಂದರು.

ಯಾವುದೇ ಸಾಮಾಜಿಕ ಬದಲಾವಣೆ ತರಬೇಕಾದರೆ ಕೆಳ, ಶೋಷಿತ ವರ್ಗಗಳ ಜನರನ್ನು ಗಣನೆಗೆ ತೆಗೆದುಕೊಂಡು ಗುರಿಮುಟ್ಟುವತನಕ ಹೋರಾಟ ನಡೆಸಬೇಕು. ಇತ್ತೀಚಿಗೆ ಹೆಚ್ಚು ಆಕರ್ಷಿಸುತ್ತಿರುವ ಸಾಮಾಜಿಕ ಮಾಧ್ಯಮಗಳ ಮೂಲಕ ಸಹಾ ಹೋರಾಟ ಮುಂದುವರೆಯಬೇಕು. ಸಮಾನ ಮನಸ್ಕರನ್ನು ಒಗ್ಗೂಡಿಸಿ ಮುನ್ನಡೆದಾಗ ಮಾತ್ರ ಸಾಮಾಜಿಕ ಪರಿವರ್ತನೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ತಮ್ಮ ತಂದೆ ಡಾ: ಮಾರ್ಟಿನ್ ಲೂಥರ್ ಕಿಂಗ್ ಜೂನಿಯರ್ ಅವರನ್ನು ಸ್ಮರಿಸಿದ ಕಿಂಗ್ – III ಅನ್ಯಾಯ ಇದ್ದ ಕಡೆ ನ್ಯಾಯವೂ ಇದ್ದೇ ಇರುತ್ತದೆ. ಶೋಷಿತರು ಒಂದಾದಾಗ ಅವರಿಗೆ ನ್ಯಾಯ ಸಿಕ್ಕೇ ಸಿಗುತ್ತದೆ ಎಂಬ ತಮ್ಮ ತಂದೆಯ ನುಡಿಗಳನ್ನು ನೆನಪಿಸಿಕೊಂಡರು.

ಅಮೇರಿಕಾದಲ್ಲೂ ಈ ಶೋಷಣೆ ಇದ್ದೇ ಇದೆ. ಬಿಳಿಯರು ಕರಿಯರ ನಡುವೆ ವರ್ಣ ಭೇದವಿದೆ. ಅಲ್ಲಿ ಒಗ್ಗಟ್ಟಿನ ಹೋರಾಟದ ಮೂಲಕ ಶೋಷಣೆ ಮುಕ್ತರಾಗುತ್ತಿದ್ದೇವೆ. ಭಾರತದ ಪರಿಸ್ಥಿತಿ ಹಾಗಲ್ಲ. ಕೆಳವರ್ಗದವರ ಸಂಖ್ಯೆ ಹೆಚ್ಚಿದೆ. ಸರ್ಕಾರವು ಕೆಳವರ್ಗದವರ ಪರವಾಗಿಯೇ ಇದೆ. ಸರ್ಕಾರ ಸೂಕ್ತ ಕಾನೂನು ಮತ್ತು ನಿಯಮ ರೂಪಿಸಿ ಕೆಳವರ್ಗದವರಿಗೆ ನ್ಯಾಯ ಕೊಡಿಸಬಹುದು ಎಂದು ಅಭಿಪ್ರಾಯಪಟ್ಟರು.

ಎಸ್‌ಎಂ/ಮಮತ/ಕವನ/ಕೆಪಿಪಿ/

## ಸರ್ಕಾರಿ ಯೋಜನೆಗಳ ಮೂಲಕ ಸಮಾನತೆ ಶಾಂತಿ ಸ್ಥಾಪನೆ ಅಂಬೇಡ್ಕರ್ ಆಶಯ

ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)

ಸರ್ಕಾರಿ ಯೋಜನೆಗಳ ಮೂಲಕ ಸಮಾಜದಲ್ಲಿ ಸಮಾನತೆ ಶಾಂತಿ ಕಾಪಾಡುವುದು ಅಂಬೇಡ್ಕರ್ ಅವರ ಆಶಯವಾಗಿತ್ತು ಎಂದು ಚಿಂತಕ ರುದ್ರಪ್ಪ ಹನಗವಾಡಿ ಅವರು ತಿಳಿಸಿದರು.

ಜಾಗತೀಕರಣ, ಖಾಸಗೀಕರಣ ಮತ್ತು ದಲಿತರು ವಿಷಯದ ಕುರಿತು ಮಾತನಾಡುತ್ತಿದ್ದ ಅವರು ಈ ಹಿನ್ನಲೆಯಲ್ಲಿ ಯೋಜನೆಗಳ ಸದ್ಬಳಕೆ ಗರಿಷ್ಠಮಟ್ಟದಲ್ಲಿ ಆಗಬೇಕೆಂಬುದು ಅಂಬೇಡ್ಕರ್ ಅವರ ವಾದವಾಗಿತ್ತು ಎಂದು ಅವರು ತಿಳಿಸಿದರು.

ಮತ್ತೊರ್ವ ಹೋರಾಟಗಾರ ಕೃಷ್ಣಪ್ಪ ಅವರು ಮಾತನಾಡುತ್ತಾ ಇಂದು ಖಾಸಗಿ ವಲಯದಲ್ಲಿ ನಾವು ಮೀಸಲಾತಿಯನ್ನು ಕಾಣುವುದು ಸಾಧ್ಯವಿಲ್ಲ. ಖಾಸಗಿ ವಲಯ ಮೀಸಲಾತಿ, ಸಮಾನತೆ ವಿರುದ್ಧ ಇದೆ. ಖಾಸಗೀಕರಣ ಆರ್ಥಿಕ ತಂತ್ರಗಾರಿಕೆಯ ಒಂದು ಭಾಗವಾಗಿದೆ. ಇದು ಸಲ್ಲದು ಖಾಸಗೀಕರಣ ಅಭಿವೃದ್ಧಿಗೆ ಪೂರಕವಾಗಿರಬೇಕು ಎಂದು ಅವರು ಅಭಿಪ್ರಾಯವ್ಯಕ್ತಪಡಿಸಿದರು. ಖಾಸಗೀಕರಣ ಹಾಗೂ ಜಾಗತೀಕರಣವನ್ನು ನಾವು ಇಂದು ಎದುರಿಸಲು ಆಗುತ್ತಿಲ್ಲ ಎಂದ ಅವರು ಖಾಸಗೀಕರಣ ವಿದ್ಯಾವಂತ ಜೀತಗಾರಿಕೆಗೆ ದಾರಿ ಮಾಡಿಕೊಟ್ಟಿರುವುದನ್ನು ನಾವಿಂದು ಕಾಣಬಹುದಾಗಿದೆ ಎಂದರು.

ಪ್ರೊ. ಅನಸೂಯ ಕಾಂಬಳೆ ಅವರು ಮಾತನಾಡಿ ಖಾಸಗೀಕರಣ ಮತ್ತು ಜಾಗತೀಕರಣ ಮನುಷ್ಯನನ್ನು ಇಂದು ಮಾರಾಟದ ಸರಕನ್ನಾಗಿಸಿದೆ. ಇದು ಖಾಸಗೀಕರಣ ಹಾಗೂ ಜಾಗತೀಕರಣದ ಭೀಕರ ದುರಂತ ಎಂದರು.

ಕಾರ್ಪೊರೇಟ್ ಕಾಯಿದೆಯಿಂದಾಗಿ ಖಾಸಗಿ ಆಸ್ತಿ ಕೆಲವೆ ಜನರ ಪಾಲಾಗಿರುವುದನ್ನು ನಾವಿಂದು ಕಾಣಬಹುದಾಗಿದೆ ಎಂದರು.

ಮಮತ/

## ಉತ್ತಮ ಸಮಾಜದ ನಿರ್ಮಾಣಕ್ಕೆ ಚಳುವಳಿಗಳು ಮುಖ್ಯ –ಭಕ್ತ ಚರಣದಾಸ್

ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)

ಸಾಮಾಜಿಕ ಹಕ್ಕುಗಳ ಸಾಧನೆಗೆ, ಉತ್ತಮ ಸಮಾಜದ ನಿರ್ಮಾಣದಲ್ಲಿ ಚಳುವಳಿಗಳು ಮುಖ್ಯಪಾತ್ರ ವಹಿಸಿದ್ದವು ಎಂದು ಭಕ್ತ ಚರಣದಾಸ್ ಅವರು ತಿಳಿಸಿದರು.

ಅವರು ಅಂಬೇಡ್ಕರ್ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಸಾಮಾಜಿಕ ಪರಿವರ್ತನೆಗಾಗಿ ಸಾಮಾಜಿಕ ಚಳುವಳಿಗಳು ಕುರಿತು ಮಾತನಾಡಿದರು. ಸ್ವರಾಜ್ ಚಳುವಳಿ, ಭಕ್ತಿಚಳುವಳಿ

ಸ್ವದೇಶಿ ಚಳುವಳಿಗಳು, ದಲಿತರು ತುಳಿತಕ್ಕೆ ಒಳಗಾದವರ ಪರ ಧ್ವನಿ ಎತ್ತಿದವು. ಸಂಕುಚಿತ ಮನಸ್ಸುಗಳನ್ನು ಬಿಡುಗಡೆಗೊಳಿಸಲು ಪ್ರಯತ್ನಿಸಿದವು. ಸಮಾಜದ ಸುಧಾರಣೆಗೆ ನಾಂದಿ ಹಾಕಿದವು ಎಂದು ಅವರು ವಿವರಿಸಿದರು.

ಇಂದು ನಾವು ಭಾರತರತ್ನ ಡಾ: ಬಿ.ಆರ್. ಅಂಬೇಡ್ಕರ್ ಅವರನ್ನು ಮತ್ತೆ ಪ್ರವೇಶಿಸಲು ಹಲವಾರು ಕಾರಣಗಳಿವೆ. ಇಂದಿಗೂ ಸಹ ಸಮಾಜ ಸಮಾನತೆ ಸೌಹಾರ್ದತೆಯನ್ನು ಪರಿಪೂರ್ಣವಾಗಿ ಸಾಧಿಸಿಲ್ಲ. ಜಾತಿ ವ್ಯವಸ್ಥೆಯಿಲ್ಲದೆ ಮಾನವ ಏಳ್ಗೆಗೆ ಶ್ರಮಿಸುವುದೇ ಉತ್ತಮ ಸಮಾಜ ಎಂದು ಡಾ: ಬಿ.ಆರ್. ಅಂಬೇಡ್ಕರ್ ಪ್ರತಿಪಾದಿಸಿದ್ದರು ಎಂದು ತಿಳಿಸಿದರು.

ಗೋಷ್ಠಿಯಲ್ಲಿ ಕೋಡಿಕುನಿಲ್ ಸುನಿಲ್, ಜಕೋಸಿ ವಿಲಿಯಮ್ಸ್ ಅಂಜೆಲಾ ಒನ್ವಾಚಿ ಭಾಗವಹಿಸಿದ್ದರು.

ಎಸ್‌ಎಂ/ಕವನ

## ಜ್ಞಾನದ ಹಣತೆಯ ಹಬ್ಬ ಡಾ: ಬಿ.ಆರ್. ಅಂಬೇಡ್ಕರ್ ಸಮ್ಮೇಳನ

ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)

ಡಾ: ಬಿ.ಆರ್. ಅಂಬೇಡ್ಕರ್ 126ನೇ ವರ್ಷಾಚರಣೆ ಅಂಗವಾಗಿ ರಾಜ್ಯ ಸರ್ಕಾರ ದೇಶದಲ್ಲೇ ಮೊದಲ ಬಾರಿಗೆ ಹಮ್ಮಿಕೊಂಡಿರುವ ಡಾ: ಬಿ.ಆರ್. ಅಂಬೇಡ್ಕರ್ ಅಂತರ ರಾಷ್ಟ್ರೀಯ ಸಮ್ಮೇಳನ ಜ್ಞನದ ಹಣತೆಯ ಹಬ್ಬದಂತಿದೆ. ವಿದೇಶಗಳಿಂದ ಇತರೆ ರಾಜ್ಯಗಳಿಂದ ಮತ್ತು ನಮ್ಮ ರಾಜ್ಯದ ಮೂಲೆ ಮೂಲೆಯಿಂದ ಆಗಮಿಸಿರುವ ಸಮಾನ ಮನಸ್ಕರರ ಸಮ್ಮೀಲನವಾಗಿದೆ.

ಅಂಬೇಡ್ಕರರು ತಮ್ಮ ಪದವಿಯನ್ನು ಬಾಂಬೆ ವಿಶ್ವವಿದ್ಯಾಲಯದಲ್ಲಿ ಪೂರ್ಣಗೊಳಿಸಿ ಹೆಚ್ಚಿನ ಜ್ಞಾನಾರ್ಜನೆಗಾಗಿ 1913 ರಲ್ಲಿ ಉನ್ನತ ಶಿಕ್ಷಣಕ್ಕಾಗಿ ಶಾಹು ಮಹಾರಾಜರಿಂದ ತಿಂಗಳಿಗೆ 11.5 ಡಾಲರ್ ಸ್ಕಾಲರ್‌ಶಿಫ್ ಪಡೆದು ಅಮೇರಿಕಾದ ಕೊಲಂಬಿಯ ವಿಶ್ವವಿದ್ಯಾನಿಲಯಕ್ಕೆ ತೆರಳಿದರು. 1917 ರಲ್ಲಿ ತಮ್ಮ ಸಂಶೋಧನೆಗೆ ಡಾಕ್ಟರೇಟ್ ಪಡೆದು ಭಾರತಕ್ಕೆ ಮರಳಿದ್ದು ನೂರು ವರ್ಷಗಳ ಹಿಂದೆ. ಶತಮಾನದ ಹಿಂದೆ ಅವರು ಭಾರತಕ್ಕೆ ಮರಳಲಿದ್ದು ಮತ್ತು ರಾಜ್ಯಸರ್ಕಾರ ಈ ವರ್ಷ ಜಗತ್ತಿನಲ್ಲಿ ಮೊದಲ ಬಾರಿಗೆ ಹಮ್ಮಿಕೊಂಡಿರುವ ಅಂಬೇಡ್ಕರ್ ಅಂತರರಾಷ್ಟ್ರೀಯ ಸಮ್ಮೇಳನ ಪ್ರಸ್ತುತ ಭಾರತಕ್ಕೊಂದು ಮೈಲಿಗಲ್ಲಾಗಲಿದೆ.

ಸಮ್ಮೇಳನವನ್ನು ಉದ್ಘಾಟಿಸಿದ ಅಂತರರಾಷ್ಟ್ರೀಯ ಮಾನವ ಹಕ್ಕುಗಳ ಹೋರಾಟಗಾರ ಹಾಗೂ ವಕೀಲ ಮೂರನೇ ಮಾರ್ಟಿನ್ ಲೂಥರ್ ಕಿಂಗ್ ಅಮೇರಿಕಾದಲ್ಲಿರುವ ಜನಾಂಗೀಯ

ತಾರತಮ್ಯ ಮತ್ತು ಭಾರತದಲ್ಲಿರುವ ಜಾತಿ ಸಮಸ್ಯೆಯನ್ನು ಹೋಲಿಕೆ ಮಾಡಿ ಮಾತನಾಡಿದರು. ಅಮೇರಿಕಾದಲ್ಲಿ ಜನಾಂಗೀಯ ತಾರತಮ್ಯಕ್ಕಾಗಿ ಮೊದಲ ಮತ್ತು ಎರಡನೇ ಮಾರ್ಟಿನ್ ಲೂಥರ್‌ಕಿಂಗ್ ಮತ್ತು ಭಾರತದಲ್ಲಿ ಮಹಾತ್ಮಾಗಾಂಧೀ ಹಾಗೂ ಬಿ.ಆರ್. ಅಂಬೇಡ್ಕರ್ ಜೀವನ ಹೋರಾಟ ಮತ್ತು ವ್ಯಕ್ತಿತ್ವಗಳಲ್ಲಿ ಹೊಂದಾಣಿಕೆ ಇರುವ ಅನೇಕ ಉದಾಹರಣೆಗಳ ಸಮೇತ ವಿವರಿಸಿದರು.

ಜಗತ್ತಿನ ಅತ್ಯಂತ ಪ್ರಮುಖ ವ್ಯಕ್ತಿಗಳು ಭಾಗವಹಿಸಿರುವ ಈ ಸಮ್ಮೇಳನದಲ್ಲಿ 300 ಕ್ಕಿಂತ ಹೆಚ್ಚು ಜನ ಸ್ಪೀಕರ್‌ಗಳಾಗಿ ಭಾಗವಹಿಸಿದ್ದರೆ 5 ಸಾವಿರಕ್ಕೂ ಹೆಚ್ಚು ಜನರು ಅವರ ಮಾತುಗಳನ್ನು ಕೇಳಲು ಮತ್ತು ಮಾತುಕತೆಯಲ್ಲಿ ಭಾಗವಹಿಸಲು ರಿಜಿಸ್ಟ್ರೇಷನ್ ಮಾಡಿಕೊಂಡಿದ್ದಾರೆ. ನಿನ್ನೆ ನಡೆದ ಉದ್ಘಾಟನೆಯಲ್ಲಿ ಎರಡು ಸಾವಿರಕ್ಕಿಂತ ಹೆಚ್ಚು ಜನರು ಭಾಗವಹಿಸಿದ್ದರು. ಇಂದು ಸಹ ಹೆಚ್ಚಿನ ಜನರು ಭಾಗವಹಿಸಿದ್ದು ನಾಳೆ ಭಾನುವಾರ ಹೆಚ್ಚಿನ ಜನ ಆಗಮಿಸುವ ನಿರೀಕ್ಷೆ ಇದೆ.

ನಾಡಿನ ಸಾಹಿತಿಗಳು, ಶಿಕ್ಷಣ ತಜ್ಞರು, ಕಾನೂನು ನಿರೂಪಕರು, ಸಾಮಾಜಿಕ ಹೋರಾಟಗಾರರು ಸೇರಿದಂತೆ ಸಾವಿರಾರು ವಿದ್ಯಾರ್ಥಿಗಳು ಇಂದು ನಡೆದ ಎರಡನೆಯ ದಿನದ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಪ್ರಸ್ತುತ ಭಾರತಕ್ಕೆ ಅಂಬೇಡ್ಕರ್ ಮರು ಓದು ಪರಿಹಾರವನ್ನು ಸೂಚಿಸಬಲ್ಲದು ಎಂಬ ವಾದಕ್ಕೆ ಉಹಾಹರಣೆಗಳ ಸಮೇತ ಚರ್ಚಿಸಲಾಯಿತು. ದೇಶ ಬೇರೆಯಾದರು, ಸಮಸ್ಯೆ ಬೇರೆಯಾದರು ತುಳಿತಕ್ಕೆ ಒಳಗಾದವರು ತಳಸಮುದಾಯದವರು ಎಂಬ ಒಕ್ಕೊರಲ ದನಿ ಸಮ್ಮೇಳನದ ತುಂಬಾ ಪ್ರತಿಧ್ವನಿಸಿತು.

ನಾಳೆ ಕೊನೆ ದಿನ ಬೆಳಿಗ್ಗೆಯಿಂದ ವಿವಿಧ ವಿಚಾರ ಸಂಕಿರಣಗಳು ನಡೆಯಲಿವೆ. ಸಂಜೆ ಸಮಾರೋಪ ಸಮಾರಂಭವಿದ್ದು ಸಮ್ಮೇಳನದ ಘೋಷಣೆಯನ್ನು ಮಾರ್ಟಿನ್ ಲೂಥರ್ ಕಿಂಗ್ ಅವರು ಮಾಡಲಿದ್ದಾರೆ.

## 6ನೇ ಕರ್ನಾಟಕ ರಾಜ್ಯ ವೇತನ ಆಯೋಗ ಸರ್ಕಾರಿ ನೌಕರರೊಂದಿಗೆ ಸಮಾಲೋಚನೆ ಆರಂಭ

ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)

6ನೇ ರಾಜ್ಯ ವೇತನ ಆಯೋಗವು, ವೇತನ ಮತ್ತು ಪರಿಷ್ಕರಣೆ ಬಗ್ಗೆ ರಾಜ್ಯ ಸರ್ಕಾರಿ ನೌಕರರೊಡನೆ ಸಮಾಲೋಚನೆಗಳನ್ನು ಆರಂಭಿಸಿದೆ. ಸಮಾಲೋಚನೆಗಳು ದಿನಾಂಕ: 27ನೇ ಜುಲೈ 2017ರಿಂದ ಪ್ರಾರಂಭಗೊಂಡು ನಾಲ್ಕು ವಾರಗಳವರೆಗೆ ವಿಸ್ತರಿಸಲಿದ್ದು, ಆಗಸ್ಟ್ 2017ರ

ಅಂತ್ಯಕ್ಕೆ ಕೊನೆಗೊಳ್ಳುವ ಸಂಭವವಿದೆ ಎಂದು ಆಯೋಗದ ಅಧ್ಯಕ್ಷ ಎಂ.ಆರ್. ಶ್ರೀನಿವಾಸಮೂರ್ತಿ ಅವರು ತಿಳಿಸಿದರು.

ಅವರು ಇಂದು ತಮ್ಮ ಕಛೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ ಸರ್ಕಾರಿ ನೌಕರರ ನೊಂದಾಯಿತ ಸಂಘಗಳು ಮತ್ತು ಇತರರೊಡನೆ ಸಮಾಲೋಚನ ಸಭೆಗಳನ್ನು ಏರ್ಪಡಿಸಲು ಅನುಕೂಲವಾಗುವಂತೆ ಆಯೋಗವು ಸಿದ್ಧಪಡಿಸಿರುವ ಪ್ರಶ್ನಾವಳಿಗಳಿಗೆ ಉತ್ತರ ಸಲ್ಲಿಸುವುದರ ಜೊತೆಗೆ ತಮ್ಮ ಜ್ಞಾಪನಗಳೇನಾದರೂ ಇದ್ದಲ್ಲಿ ಅದನ್ನು ಮುಂದಿನ ಕೆಲವು ದಿನಗಳೊಳಗೆ ಸಲ್ಲಿಸುವಂತೆ, ರಾಜ್ಯ ಸರ್ಕಾರಿ ನೌಕರರು, ಪಿಂಚಣಿದಾರರು ಮತ್ತು ನೌಕರರು ಹಾಗೂ ಪಿಂಚಣಿದಾರರ ಸಂಘಗಳಿಗೆ ಆಯೋಗವು ತಿಳಿಸಲಾಗಿದೆ ಎಂದರು.

ಸರ್ಕಾರದ ಹಿರಿಯ ಅಧಿಕಾರಿಗಳು, ನೌಕರರ ಸಂಘಗಳು, ವಿಶ್ವವಿದ್ಯಾನಿಲಯಗಳು, ಸ್ಥಳೀಯ ಸಂಸ್ಥೆಗಳು ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳಿಂದ ಅಭಿಪ್ರಾಯ ಪಡೆಯುವ ಉದ್ದೇಶದಿಂದ ಆಯೋಗವು 7 ಪ್ರಶ್ನಾವಳಿಗಳನ್ನು ಪ್ರಕಟಿಸಿದೆ. ಪ್ರಶ್ನಾವಳಿಗಳ ಜೊತೆಯಲ್ಲಿ ಸರ್ಕಾರಿ ನೌಕರರ ಪ್ರಸ್ತುತ ವೇತನ ರಚನೆಯ ವಿವರಗಳಿರುವ ಹಿನ್ನೆಲೆ ಟಿಪ್ಪಣಿಯೂ ಸೇರಿದೆ. ಪ್ರಶ್ನಾವಳಿಗಳನ್ನು ಆಯೋಗದ ಅಂತರ್ಜಾಲ ತಾಣ (**website**) **www.karnataka.gov.in/paycommission** ನಿಂದ ಪಡೆದುಕೊಳ್ಳಬಹುದು ಎಂದು ತಿಳಿಸಿದರು.

ಸಮಾಲೋಚನೆಯ ಪ್ರಕ್ರಿಯೆಯ ಭಾಗವಾಗಿ ಆಯೋಗವು ಸಂಸತ್ತಿನ ಸದಸ್ಯರು, ರಾಜ್ಯ ವಿಧಾನ ಮಂಡಲದ ಸದಸ್ಯರು ಮತ್ತು ಪ್ರಮುಖ ಚುನಾಯಿತ ಸ್ಥಳೀಯ ಸಂಸ್ಥೆಗಳ ಸದಸ್ಯರು ಹಾಗೂ ಸರ್ಕಾರದ ಕಾರ್ಯದರ್ಶಿಗಳು ಮತ್ತು ಇಲಾಖಾ ಮುಖ್ಯಸ್ಥರಂತಹ ಸರ್ಕಾರದ ಹಿರಿಯ ಅಧಿಕಾರಿಗಳ ಅಭಿಪ್ರಾಯವನ್ನು ಪಡೆಯಲು ಉದ್ದೇಶಿಸಲಾಗಿದೆ ಎಂದು ವಿವರಿಸಿದರು.

ಚುನಾಯಿತ ಪ್ರತಿನಿಧಿಗಳು ಮತ್ತು ಸಾರ್ವಜನಿಕರಿಗಾಗಿ ಪ್ರತ್ಯೇಕ ಪ್ರಶ್ನಾವಳಿಯನ್ನು ಆಯೋಗವು ಹೊಂದಿದ್ದು, ಸರ್ಕಾರಿ ನೌಕರರ ಉತ್ಪಾದಕತೆ ಮತ್ತು ದಕ್ಷತೆಯನ್ನು ಹೆಚ್ಚಿಸುವ ಮಾರ್ಗಗಳು ಮುಂತಾದ ವಿವಿಧ ವಿಚಾರಗಳ ಬಗ್ಗೆ ಅವರ ಅಭಿಪ್ರಾಯವನ್ನು ಕೋರಲಾಗಿದೆ ಎಂದರು.

ಸಾರ್ವಜನಿಕರು ಮತ್ತು ನೌಕರರ ವಿಶಾಲ ವ್ಯಾಪ್ತಿಯ ಅಭಿಪ್ರಾಯವನ್ನು ಪಡೆಯಲು ಆಯೋಗವು ಆಯ್ದ ಜಿಲ್ಲಾ ಕೇಂದ್ರಗಳಲ್ಲಿಯೂ ತನ್ನ ಸಭೆಗಳನ್ನು ನಡೆಸಲಿದೆ ಎಂದು ತಿಳಿಸಿದರು.

ಜೂನ್ 2017ರಲ್ಲಿ ರಚನೆಯಾಗಿರುವ 6ನೇ ರಾಜ್ಯ ವೇತನ ಆಯೋಗವು ಸುಮಾರು 5.2 ಲಕ್ಷ ಸಂಖ್ಯೆಯ ಸರ್ಕಾರಿ ನೌಕರರ ವೇತನ ರಚನೆ ಮತ್ತು ಅವರಿಗೆ ನೀಡುತ್ತಿರುವ ವಿವಿಧ ವೇತನಗಳ ಪರಿಷ್ಕರಣೆಯ ಬಗ್ಗೆ ಶಿಫಾರಸ್ಸು ಮಾಡಬೇಕಾಗಿದೆ. ಅದರ ಶಿಫಾರಸ್ಸುಗಳು ಸುಮಾರು 5.56 ಲಕ್ಷ ಪಿಂಚಣಿದಾರರು ಮತ್ತು ಸುಮಾರು 1.50 ಲಕ್ಷ ಸ್ಥಳೀಯ ಸಂಸ್ಥೆಯ ಮತ್ತು ಅನುದಾನಿತ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿ ಹಾಗೂ ವಿಶ್ವವಿದ್ಯಾನಿಲಯಗಳ ಬೋಧಕೇತರ ಸಿಬ್ಬಂದಿಗಳಿಗೂ ಅನ್ವಯವಾಗಲಿದೆ ಎಂದು ಮಾಹಿತಿ ನೀಡಿದರು.

ಆಯೋಗದ ಪ್ರಶ್ನಾವಳಿಗಳಿಗೆ ಉತ್ತರಗಳು ಹಾಗೂ ಆಯೋಗಕ್ಕೆ ಸಲ್ಲಿಸಬೇಕಾದ ಜ್ಞಾಪನ ಅಥವಾ ಮನವಿಗಳನ್ನು ಕಾರ್ಯದರ್ಶಿ 6ನೇ ರಾಜ್ಯ ವೇತನ ಆಯೋಗ, ಕಾಫಿ ಬೋರ್ಡ್ ಬಿಲ್ಡಿಂಗ್ (ಮೊದಲನೆ ಮಹಡಿ), ಡಾ.ಅಂಬೇಡ್ಕರ್ ವೀದಿ, ಬೆಂಗಳೂರು–560001 ಇವರಿಗೆ ಕಳುಹಿಸಬೇಕೆಂದು ಸೂಚಿಸಬಹುದಾಗಿದೆ. ಪತ್ರಿಕಾಗೋಷ್ಠಿಯಲ್ಲಿ ಆಯೋಗವು ಯಾವುದೇ ಪೂರ್ವಗ್ರಹವಿಲ್ಲದೆ ವಸ್ತುನಿಷ್ಠವಾಗಿ ವರದಿ ಸಲ್ಲಿಸಲಿದೆ ಎಂದು ಅವರು ಪತ್ರಕರ್ತರ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ ಸ್ಪಷ್ಟಪಡಿಸಿದರು. ಪತ್ರಿಕಾಗೋಷ್ಠಿಯಲ್ಲಿ ಆಯೋಗದ ಸದಸ್ಯ ಕಾರ್ಯದರ್ಶಿ ಶ್ರೀ ಮಂಜುನಾಥ ನಾಯಕ್, ಸದಸ್ಯರಾದ ಮಹಮ್ಮದ್ ಸನಾವುಲ್ಲಾ, ಆರ್. ಘೊಂಡೆ ಉಪಸ್ಥಿತರಿದ್ದರು.

## Pay commission invites memoranda on Pay revision

**The 6th State Pay Commission has called upon the government employees, pensioners and associations of employees and pensioners to submit their memoranda if any along with replies to a set of questionnaires designed by the Commission within the next few days to facilitate fixing consultation meetings with various registered associations and others.**

**M.R. Shrinivasamurthy, Chairman of the Commission briefed the media about the preparations of the Commission for holding consultation regarding the Pay revision today at his office. The 6th State Pay Commission has commenced consultations with State Government employees regarding the revision of pay and allowances. The consultations will be spread over four weeks commencing from 27th July 2017 and are expected to conclude before the end of August 2017, he said.**

**The Commission has published a set of seven questionnaires meant for eliciting the views of senior Government functionaries,employees'associations, universities, local bodies and aided institutions. The questionnaires are accompanied by a background note outlining the existing pay structure of employees. The questionnaires may be downloaded from the Commission's website www.karnataka.gov.in/paycommission.**

**As part of its consultation process, the Commission intends to seek the views of Members of Parliament, Members of State Legislature and important elected representatives of local government institutions as also senior functionaries in government like Secretaries to Government and Heads of Departments.**

**The Commission has a separate questionnaire for elected representatives and the general public whose responses are sought on various issues like the mode of increasing the productivity and efficiency of government employees, and related issues.**

**The Commission also intends to have sittings in selected district head quarters to elicit views from a wide spectrum of people and employees.**

**The sixth State Pay Commission appointed in June 2017, is required to make recommendations on the revision of the pay structure and various allowances paid to employees of State Government numbering about 5.20 lakhs. The recommendations will also be applicable to about 5.56 lakh pensioners and 1.50 lakh employees of Local bodies, aided educational institutions and non teaching staff of Universities.**

**Responses to the Commission's questionnaires as well as any memoranda or representations to be submitted to the Pay Commission should be addressed to the Secretary, 6th State Pay Commission, Coffee Board Building (First Floor), Dr.AmbedkarVeedhi, Bengaluru-560001.**

**Members of the Commission MohmedSanaulla and R.S. Phonde, Secretary ManjunathaNayak were present.**

## ಹೊರಗುತ್ತಿಗೆ ಆಧಾರದ ಮೇಲೆ ಭಾಷಾಂತರಕಾರರ ನೇಮಕ

ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)

ಭಾಷಾಂತರ ಇಲಾಖೆಯಲ್ಲಿ ಭಾಷಾಂತರ ಇಲಾಖೆಯ ನಿವೃತ್ತ ಅಧಿಕಾರಿಗಳು, ನಿವೃತ್ತ ಉಪನ್ಯಾಸಕರು, ವಿಶ್ವವಿದ್ಯಾನಿಲಯದ ಹಾಲಿ ಮತ್ತು ನಿವೃತ್ತ ಪ್ರಾಧ್ಯಾಪಕರು ಹಾಗೂ ಇತರೆ ಭಾಷಾಂತರದಲ್ಲಿ ಅನುಭವ ಹಾಗೂ ಆಸಕ್ತಿಯಿರುವ ವ್ಯಕ್ತಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

ಹೊರಗುತ್ತಿಗೆ ಆಧಾರದ ಮೇಲೆ ಭಾಷಾಂತರ ಕಾರ್ಯ ಮಾಡಲು ಇತರ ಭಾಷೆಗಳಾದ ಹಿಂದಿ, ತೆಲುಗು, ತಮಿಳು, ಮರಾಠಿ, ಮಲಯಾಳಂ, ಗುಜರಾತಿ, ಉರ್ದು ಹಾಘೂ ಇತ್ಯಾದಿ ಆಯಾಯಾ ಭಾಷೆಗಳ ಭಾಷಾಂತರದ ಅರಿವು ಇರುವ ಆಸಕ್ತ ಅನುಭವೀ ಭಾಷಾಂತರಕಾರರಿಂದಲೂ ಅರ್ಜಿಗಳನ್ನು ಆಹ್ವಾನಿಸಿದೆ.

ಅರ್ಜಿಯನ್ನು ಅಧಿಸೂಚನೆ ಪ್ರಕಟವಾದ ಮೂವತ್ತು ದಿನಗಳೊಳಗಾಗಿ ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ನೆಲಮಹಡಿ, ವಿಶ್ವೇಶ್ವರಯ್ಯ ಕೇಂದ್ರ, ಡಾ. ಬಿ. ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು – 560 001 ಇವರಿಗೆ ತಲುಪುವಂತೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಭಾಷಾಂತರ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ನೆಲಮಹಡಿ, ವಿಶ್ವೇಶ್ವರಯ್ಯ ಕೇಂದ್ರ, ಡಾ. ಬಿ.ಆರ್. ಅಂಬೇಡ್ಕರ್ ರಸ್ತೆ, ಬೆಂಗಳೂರು – 560 001 ಇವರನ್ನು ಸಂಪರ್ಕಿಸುವುದು ಅಥವಾ ಇಲಾಖಾ ವೆಬ್‌ಸೈಟ್ **www.translations.kar.nic.in** ಇದರಲ್ಲಿ ಕೆಲಸದ ಸ್ವರೂಪ ಈ ಶೀರ್ಷಿಕೆಯಡಿಯಲ್ಲಿ ಮಾಹಿತಿ ಪಡೆಯಬಹುದಾಗಿದೆ ಎಂದು ಭಾಷಾಂತರ ಇಲಾಖೆಯ ಪ್ರಕಟಣೆ ತಿಳಿಸಿದೆ

ಎಸ್‌ಎಂ:ಜೆಡಿ:ಜಿಪಿಆರ್.

## ಕಾರ್ಗಿಲ್ ವಿಜಯ್ ದಿವಸ್ ಆಚರಣೆ – 2017

ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)

1999 ರಲ್ಲಿ ನಡೆದ ಕಾರ್ಗಿಲ್ ಯುದ್ಧದಲ್ಲಿ ಜಯವನ್ನು ತಂದು ಕೊಡಲು ದೇಶಕ್ಕಾಗಿ ಪ್ರಾಣತೆತ್ತ ವೀರ ಯೋಧರ/ಹುತ್ಮಾತರ ಸ್ಮರಣೆಯ ಸಂಕೇತವಾಗಿ ಪ್ರತಿ ವರ್ಷದಂತೆ, ಈ ವರ್ಷವೂ ಸಹ ಕಾರ್ಗಿಲ್ ವಿಜಯ ದಿವಸ್ ಆಚರಣೆಯನ್ನು ಜುಲೈ 26 ರ ಬುಧವಾರದಂದು ಬೆಳಿಗ್ಗೆ 8.45 ಗಂಟೆಗೆ ಬೆಂಗಳೂರಿನ ರಾಷ್ಟ್ರೀಯ ಮಿಲಿಟರಿ ಸ್ಮಾರಕ ಶ್ರೀಮತಿ ಇಂದಿರಾಗಾಂಧಿ ಸಂಗೀತ ಕಾರಂಜಿ ಉದ್ಯಾನವನದ ಹತ್ತಿರ, ಚೌಡಯ್ಯ ರಸ್ತೆ, ನೆಹರು ತಾರಾಲಯದ ಎದುರು, ರಾಜ ಭವನದ ಹತ್ತಿರ, ಬೆಂಗಳೂರು – 560 001 ರಲ್ಲಿ ಆಚರಿಸಲಾಗುವುದು.

ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಮುಖ್ಯಮಂತ್ರಿ ಅವರು ಆಗಮಿಸಲಿದ್ದಾರೆ. ಇದಲ್ಲದೇ, ಈ ಸಮಾರಂಭದಲ್ಲಿ ಸೇವಾನಿರತ/ನಿವೃತ್ತಿ ಹಿರಿಯ ಸೇನಾಧಿಕಾರಿಗಳು, ಮಾಜಿ ಸೈನಿಕರು ಮತ್ತು ಹಿರಿಯ ನಾಗರೀಕ ಸೇವೆಯ ಅಧಿಕಾರಿಗಳು, ಎನ್‌ಸಿಸಿ ಕೆಡೆಟ್ ಗಹ ಆಮಿಸಲಿದ್ದಾರೆ.

ವೀರಯೋಧರ ಗೌರವ ವಂದನೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಈ ಕಾರ್ಗಿಲ್ ವಿಜಯ್ ದಿವಸ್ ಆಚರಣೆಯಲ್ಲಿ ಪಾಲ್ಗೊಳ್ಳುವಂತೆ ರಾಜ್ಯದ ಜನತೆಯಲ್ಲಿ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆಯ ನಿರ್ದೇಶಕರು ವಿನಂತಿಸಿದ್ದಾರೆ.

ಎಸ್‌ಎಂ:ಜಿಪಿಆರ್.

# KARGIL VIJAY DIWAS - 2017

**Bengaluru, July 22 (Karnataka Information)**

**As in the past, to pay homage to the brave and valiant soldiers who laid down their lives during 1999 Kargil War, Kargil Vijay Diwas Function – 2017 will be organised on 26th July 2017 (Wednesday) at 8-45 AM at National Military Memorial, adjacent**

**to Smt India Gandhi Musical Fountain on Chowdaiah Road, opp. Nehru Planetarium, Near Raj Bhavan, Bengaluru – 560 001.**

**Chief Minister will be the Chief Guest for the function. Other Ministers, Civil and Military serving Officers, retired Defence Officers, a large number of Ex-servicemen and their families, NCC Cadets, school children and Serving Soldiers will be participating in the function.**

**sm/gpr**

## ವಿವಿಧ ಹುದ್ದೆಗಳ ಜೇಷ್ಠತಾ ಪಟ್ಟಿ ಪ್ರಕಟ – ಆಕ್ಷೇಪಣೆ ಸಲ್ಲಿಸಲು ಕಾಲಾವಕಾಶ

**ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)**

**ಸರ್ವೋಚ್ಚ ನ್ಯಾಯಾಲವಯ ಸಿವಿಲ್ ಅಪೀಲ್ ಸಂಖ್ಯೆ 2368/2011 ರಲ್ಲಿ ದಿನಾಂಕ: 09–02–2017 ರಂದು ನೀಡಿದ ತೀರ್ಪನ್ನು ಅನುಷ್ಠಾನಗೊಳಿಸುವ ಬಗ್ಗೆ ಅಭಿಯೋಗ ಮತ್ತು ಸರ್ಕಾರಿ ವ್ಯಾಜ್ಯಗಳ ಇಲಾಖೆಯ ಗೂಪ್ "ಬಿ" ವೃಂದದ ಆಡಳಿತಾಧಿಕಾರಿಗಳು, ಗ್ರೂಪ "ಸಿ" ವೃಂದದ ಅಧೀಕ್ಷಕರು, ಪ್ರಥಮ ದರ್ಜೆ ಸಹಾಯಕರು, ಶೀಘ್ರಲಿಪಿಗಾರರು, ಹಿರಿಯ ಬೆರಳಚ್ಚುಗಾರರು, ದ್ವಿತೀಯ ದರ್ಜೆ ಸಹಾಯಕರು, ಗ್ರೂಪ್ "ಡಿ" ವೃಂದದ ಅಟೆಂಡರ್‌ಗಳ ಕರಡು ಜೇಷ್ಠತಾ ಪಟ್ಟಿಯನ್ನು ಇಲಾಖೆಯ ಕೇಂದ್ರ ಕಚೇರಿ ಹಾಗೂ ವಲಯ ಕಚೇರಿಗಳ ಸೂಚನಾ ಫಲಕದಲ್ಲಿ ಪ್ರಕಟಿಸಿದೆ. ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ: 31–07–2017 ಆಗಿರುತ್ತದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.**

**ಎಸ್‌ಎಂ:ಜೆಡಿ:ಜಿಪಿಆರ್.**

## ಪೋಸ್ಟ್ ಆಫೀಸ್ ಪಾಸ್‌ಪೋರ್ಟ್ ಸೇವಾ ಕೇಂದ್ರ

**ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)**

ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ರಹದಾರಿ ಪಡೆಯಲು ಪೋಸ್ಟ್ ಆಫೀಸ್ ಪಾಸ್ ಪೋರ್ಟ್ ಸೇವಾ ಕೇಂದ್ರಗಳನ್ನು ದೇಶದ ವಿವಿಧ ರಾಜ್ಯಗಳಲ್ಲಿ ತೆರೆದಿದ್ದು, ಕರ್ನಾಟಕ ರಾಜ್ಯದ ಬಳ್ಳಾರಿ, ಬೀದರ್, ರಾಯಚೂರು, ಶಿವಮೊಗ್ಗ, ತುಮಕೂರು, ಉಡುಪಿ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ತೆರೆದಿದ್ದು, ಅಲ್ಲಿನ ಸಾರ್ವಜನಿಕರು ಈ ಪೋಸ್ಟ್ ಆಫೀಸ್ ಪಾಸ್ ಪೋರ್ಟ್ ಸೇವಾ ಕೇಂದ್ರಗಳ ಸದುಪಯೋಗವನ್ನು ಪಡೆಯಬಹುದಾಗಿದೆ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಎಸ್‌ಎಂ:ಜೆಡಿ:ಜಿಪಿಆರ್.

## ಡಿಪ್ಲೋಮೊ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ಪ್ರವೇಶ- ಮಹಿಳೆಯರಿಗೆ ಮಾತ್ರ

ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)

ಬೆಂಗಳೂರು ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿರುವ ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ (ಜಿಟಿಟಿಸಿ) ಸಂಸ್ಥೆಯಲ್ಲಿ ಎಸ್.ಎಸ್.ಎಲ್.ಸಿ. ಪಾಸಾದ ವಿದ್ಯಾರ್ಥಿನಿಯರುಗಳಿಗೆ ಡಿಪ್ಲೋಮ ಇನ್ ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಇಂಜಿನಿಯರಿಂಗ್ ಕೋರ್ಸ್ ಪ್ರವೇಶಕ್ಕೆ ಜುಲೈ 29, 2017 ರವರೆಗೆ ಅರ್ಜಿ ಆಹ್ವಾನಿಸಿದೆ. ಹೆಚ್ಚಿನ ಮಾಹಿತಿಗೆ 9844312400/ 9141629566 ನ್ನು ಸಂಪರ್ಕಿಸಬಹುದಾಗಿದೆ.

## ವೇಳಾಪಟ್ಟಿ ಆಯೋಗದ ವೆಬ್‌ಸೈಟ್‌ನಲ್ಲಿ ಪ್ರಕಟ

ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)

ಕರ್ನಾಟಕ ಲೋಕಸೇವಾ ಆಯೋಗವು 2015 ನೇ ಸಾಲಿನ 428 ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ಬೆಂಗಳೂರನ್ನು ಪರೀಕ್ಷಾ ಕೇಂದ್ರವನ್ನಾಗಿ ಆಯ್ಕೆಮಾಡಿಕೊಂಡಿರುವ ಅಂಧ/ದೃಷ್ಟಿಮಾಂದ್ಯ ಅಭ್ಯರ್ಥಿಗಳಿಗೆ ಜುಲೈ 22 ರಿಂದ 29 ರವರೆಗೆ ಬೆಂಗಳೂರಿನ ಮಿಂಟೋ ಕಣ್ಣಾಸ್ಪತ್ರೆಯಲ್ಲಿ ಹಾಗೂ ವಿವಿಧ 9 ಜಿಲ್ಲೆಗಳನ್ನು ಆಯ್ಕುಮಾಡಿಕೊಂಡಿರುವ ಅಭ್ಯರ್ಥಿಗಳಿಗೆ ಆಯಾ ಜಿಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಜುಲೈ 25 ಮತ್ತು 26 ರಂದು ವೈದ್ಯಕೀಯ ತಪಾಸಣೆಯನ್ನು ನಡೆಸುತ್ತಿದೆ.

ಈ ಸಂಬಂಧ ಅಭ್ಯರ್ಥಿಗಳು ಈಗಾಗಲೇ ತಮಗೆ ರವಾನಿಸಲಾಗಿರುವ ಸೂಚನಾ ಪತ್ರದಲ್ಲಿ, ಇ-ಮೇಲ್ ಸಂದೇಶದಲ್ಲಿ ತಿಳಿಸಿರುವ ದಿನಾಂಕದಂದು, ಓ.ಪಿ.ಡಿ. ಪುಸ್ತಕವನ್ನು

ತಪಾಸಣಾ ದಿನದಂದು ಆಯಾ ಜಿಲ್ಲಾ ಆಸ್ಪತ್ರೆಗಳಲ್ಲಿಯೇ ಪಡೆದು ನಿಗದಿಪಡಿಸಿರುವ ವೈದ್ಯಕೀಯ ಸಮಿತಿಯ ಮುಂದೆ, ವೈದ್ಯಕೀಯ ಪರೀಕ್ಷೆಗೆ ಹಾಜರಾಗುವಂತೆ ಸೂಚಿಸಿದೆ. ವಿವರವಾದ ವೇಳಾಪಟ್ಟಿಯನ್ನು ಕರ್ನಾಟಕ ಲೋಕಸೇವಾ ಆಯೋಗದ ವೆಬ್‌ಸೈಟ್ **http://kpsc.kar.nic.in/List** ನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಿದೆ.

## "ಜೋಗ್ ಜಲಪಾತ, ಸಿಗಂದೂರು ಚೌಡೇಶ್ವರಿ ಪ್ರವಾಸ"

ಬೆಂಗಳೂರು, ಜುಲೈ 22 (ಕರ್ನಾಟಕ ವಾರ್ತೆ)

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಸಾರಿಗೆ ವಿಭಾಗದಿಂದ ವ್ಯವಸ್ಥಿತ ಪ್ರವಾಸದಲ್ಲಿ "ಜೋಗ್ ಜಲಪಾತ, ಸಿಗಂದೂರು ಚೌಡೇಶ್ವರಿ ಪ್ರವಾಸ" ಪ್ರತೀ ಶುಕ್ರವಾರ ಮತ್ತು ಶನಿವಾರಗಳಂದು ರಾತ್ರಿ 10.00 ಗಂಟೆಗೆ ಬೆಂಗಳೂರಿನಿಂದ ಹೊರಟು ಪ್ರವಾಸ ಮುಗಿಸಿ ಭಾನುವಾರ ಮತ್ತು ಸೋಮವಾರ ಬೆಳಿಗ್ಗೆ 06.00 ಗಂಟೆಗೆ ವಾಪಸ್ಸಾಗುವುದು. ಈ ಪ್ರವಾಸದಲ್ಲಿ ಸ್ನಾನಕ್ಕೆ ಮಾತ್ರ ವಸತಿ ಕಲ್ಪಿಸಲಾಗಿದ್ದು, ಪ್ರವಾಸದ ದರ ಒಬ್ಬರಿಗೆ ರೂ.1,590/- ಗಳಾಗಿರುತ್ತದೆ.

ಈ ಪ್ರವಾಸವನ್ನು ಆಗಸ್ಟ್ ತಿಂಗಳ ಋತುಮಾನದಲ್ಲಿ ದಿನಾಂಕ: 04-08-2017 ರಂದು ಪ್ರಾರಂಭಿಸಲಾಗುವುದು. ಪ್ರವಾಸದ ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 8970650070, 080-22275883 / 869, 080-43344334 ಗಳನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.